ಅವರು ಅಂದುಕೊಳ್ಳೋದಿಲ್ವ? ಎಂದು ನನ್ನ ಹಿರಿಯ ಗೆಳೆಯರೊಬ್ಬರು ಗದರಿದ್ದರು. ನಾನವರಿಗೆ, 'ನಾನು ಹಾಗೇನೆ ಸರ್. ವಿಷಯ ತಿಳಿಯುವ, ಹಸಿದಾಗ ಊಟ ಕೇಳಿ ಪಡೆಯುವ ವಿಷಯದಲ್ಲಿ ಯಾವತ್ತೂ ಭಿಕ್ಷುಕನೇ. ನನಗೆ ಸಂಕೋಚವೇ ಇಲ್ಲ' ಎಂದು ನಗುತ್ತಲೇ ಹೇಳಿದ್ದೆ. ಅವರಿಗೆ ನನ್ನ ಈ ವರ್ತನೆ ಸ್ವಲವೂ ಇಷ್ಟವಾಗುವುದಿಲ್ಲ.

ಫೋಟೊಗ್ರಫಿ ಪಯಣದಲ್ಲಿ ಪ್ರತಿ ಊರು, ಪ್ರತಿ ಸ್ಥಳವೂ ಪ್ರತಿ ವಾತಾರಣವೂ ವಿಭಿನ್ನವಾಗಿರುತ್ತದೆ. ಸೂರ್ಯನ ಬೆಳಕು ಬೀಳುವ ಕ್ರಮ; ಹಕ್ಕಿಯ ನಡತೆ, ಹಕ್ಕಿಯ ಆಗಮನ ಮತ್ತು ನಿರ್ಗಮನ, ಅದು ಕೂರುವ ಭಂಗಿ, ಪಟದ ಹಿನ್ನೆಲೆಯಲ್ಲಿ ಬರುವ ವಿನ್ಯಾಸ, ಎಲ್ಲವೂ ಸ್ಥಳೀಯ ನ್ಯಾಚುರಲಿಸ್ಟ್‌ಗಳಿಗೆ ಗೊತ್ತಿರುತ್ತದೆ. ದಿನವೂ ಅಲ್ಲೇ ಬಿದ್ದು ಬಡಿದಾಡುವ ಅವರಿಗೆ ಅನೇಕ ಪಟಗಾರರ ಗೆಲವು ಸೋಲುಗಳು, ಅಭಾಸಗಳು, ಎಡವಟ್ಟುಗಳು ಗೊತ್ತಿರುತ್ತವೆ. ಹೀಗಾಗಿ ಅವರಿಂದ ಮಾಹಿತಿ, ಸಲಹೆ ಕೇಳುವುದು ನನ್ನ ಪ್ರಕಾರ ಎಂದೂ ತಪ್ಪಲ್ಲ.

ಮಾರನೆಯ ದಿನ ಎಲ್ದೋಸ್ ಮೂರು ಮೈಲಿ ದೂರದಲ್ಲಿದ್ದ ಮತ್ತೊಂದು ಜಾಗಕ್ಕೆ ಕರೆದುಕೊಂಡು ಹೋದ. ಎಲ್ಲಾ ತಯಾರಾಗಿ ಅಲ್ಲಿಗೆ ಬರಬಹುದಾದ ವೈಟ್ ಬಿಲ್ಲೀಡ್ ಟ್ರೀಪೇ, ಮಲಬಾರ್ ಗ್ರೇ ಹಾರ್ನ್ ಬಿಲ್, ರೂಫಸ್ ಬ್ಯಾಬ್ಲರ್, ಮುಂತಾದ ಪಕ್ಷಿಗಳ ಆಗಮನಕ್ಕೆ ಕಾದೆವು. ನಮ್ಮ ಗ್ರಹಚಾರವೋ ಏನೋ ಆ ದಿನ ಭರ್ಜರಿ ಮಳೆ ಹೊಡೆಯಿತು. ಕ್ಯಾಮೆರಾ ಕಾಪಾಡಿಕೊಂಡು ಅಲ್ಲಿಂದ ಎದ್ದು ಬರುವುದೇ ಕಷ್ಟವಾಯಿತು. ಯಾವುದೇ ಸೂರಿಲ್ಲದ ಅಲ್ಲಿ ನಾವು ಒದ್ದಾಡಿ ಹೋದೆವು. ನಮ್ಮ ಪಟ ಪಯಣ ಅಲ್ಲಿಗೆ ಮುಗಿಸಿ ಎಲ್ದೋಸ್‌ಗೆ ಹೋಗಿ ಬರುತ್ತೇವೆಂದು ಹೇಳಿ ಹೊರಟದ್ದೇ ಕೊನೆ. ಆನಂತರದ ದಿನಗಳಲ್ಲಿ ಆತ ತೀರಿ ಹೋದ ಸುದ್ದಿ ತಿಳಿದು ಬೇಜಾರಾಯಿತು. ಆತನ ಕೊನೆಯ ದಿನಗಳು ದಾರುಣವಾಗಿದ್ದವೆಂದು ಆತ ಆತ್ಮಹತ್ಯೆ ಮಾಡಿಕೊಂಡನೆಂದೂ ಗೊತ್ತಾಯಿತು. ಹಕ್ಕಿಗಳ ಜೊತೆಗಿದ್ದು ಆಯಸ್ಸು ಹೆಚ್ಚಿಸಿಕೊಂಡವರ ಕಥೆ ಕೇಳಿದ್ದ ನನಗೆ ಈ ಸಾವು ಇಂದಿಗೂ ವಿಚಿತ್ರ ಎನಿಸುತ್ತದೆ. ಮನುಷ್ಯನ ಅಂತರಂಗದಲ್ಲಿ ನಡೆಯುವ ಪಲ್ಲಟಗಳನ್ನು ಅರಿಯುವುದು ಅಷ್ಟು ಸುಲಭದ ಮಾತಲ್ಲ.

ಮಾರನೆಯ ದಿನ ನಾವು ಅಲ್ಲೇ ಸನಿಹದಲ್ಲಿರುವ ಸಲೀಂ ಅಲಿ ನ್ಯಾಷನಲ್ ಪಾರ್ಕಿಗೆ ಹೊರಟೆವು. ನ್ಯಾಚುರಲಿಸ್ಟ್ ಸುಧಾ ಎಂಬುವರನ್ನು ಸಂಪರ್ಕಿಸಿದ್ದೆವು. ರಾಷ್ಟ್ರೀಯ ಉದ್ಯಾನವನ ದಾಟಿಕೊಂಡೇ ಸುಧಾ ಅವರ ಮನೆ ತಲುಪುವುದಿತ್ತು. ಉದ್ಯಾನವನ ವ್ಯಾಪ್ತಿಯೊಳಗೆ ಒಂದಷ್ಟು ಮನೆಗಳು ಬಾಕಿ ಉಳಿದಿದ್ದು ಅದರಲ್ಲಿ ಸುಧಾ ಅವರ ಮನೆ ಕೂಡ ಸೇರಿತ್ತು. ಅಸಲಿಗೆ ತಟ್ಟೇಕ್ಕಾಡ್ ಕೇರಳದ ಮೊದಲ ಪಕ್ಷಿಧಾಮ. ಪ್ರಸಿದ್ಧ ಪಕ್ಷಿಶಾಸ್ತ್ರಜ್ಞ ಸಲೀಂ ಅಲಿ ಅನೇಕ ವರ್ಷ ಇಲ್ಲಿ ಹಕ್ಕಿಗಳ ಅಧ್ಯಯನದಲ್ಲಿ ತೊಡಗಿದ್ದರು. ತಟ್ಟೇಕ್ಕಾಡ್ ಎಂದರೆ ಸಮತಟ್ಟಾದ ಅರಣ್ಯ ಎಂದರ್ಥ. ಕೇರಳದ ಅತಿ ಉದ್ದದ ನದಿ ಪೆರಿಯಾರ್ ಈ ಕಾಡನ್ನು ಬಳ್ಳಿಯಂತೆ ಸುತ್ತಿಕೊಂಡಿದೆ. ನಡುವಿನ ದ್ವೀಪದಂತಹ ಸುರಕ್ಷಿತ ಜಾಗದ ದಟ್ಟ ಕಾಡಿನಲ್ಲಿ ಪಕ್ಷಿಗಳ ಕಲರವ

